# ಹೊಸತು

## ಕರಾಟ್‌ಲೇನ್ ಒಡವೆ



ಒಡವೆಗಳ ಮಾರಾಟಕ್ಕೆ ಹೆಸರಾದ ಕರಾಟ್‌ಲೇನ್ ಕಂಪೆನಿ ಚಿನ್ನದ ಒಡವೆಗಳ ಸಂಗ್ರಹವನ್ನು ಮಾರುಕಟ್ಟೆಗೆ ತಂದಿದೆ. ಮರದ ಸೂಕ್ಷ್ಮ ಕೆತ್ತನೆಯಿಂದ ಸ್ಫೂರ್ತಿ ಪಡೆದು ವಿನ್ಯಾಸಗೊಳಿಸಲಾಗಿದ್ದು, ಗ್ರಾಹಕರಿಗೆ ಮೆಚ್ಚುಗೆಯಾಗಲಿದೆ ಎಂದು ಕಂಪೆನಿ ವಿಶ್ವಾಸ ವ್ಯಕ್ತ ಪಡಿಸಿದೆ. ಬೆಲೆ 13,700 ರೂಪಾಯಿಯಿಂದ ಆರಂಭ. ಮಾಹಿತಿಗೆ www.caratlane.com

## ಗೋಲ್ಡನ್ ಒರಿಯೊ ಬಿಸ್ಕೆಟ್

ಆಹಾರ ಉತ್ಪನ್ನಗಳಿಗೆ ಹೆಸರಾದ ಮಾಂಡಲಡಜ್ ಇಂಡಿಯಾ ಕಂಪೆನಿ 'ಗೋಲ್ಡನ್ ಒರಿಯೊ' ಬಿಸ್ಕೆಟ್ ಅನ್ನು ಪರಿಚಯಿಸಿದೆ. ಇದರಲ್ಲಿನ ಕ್ರೀಮ್‌ನ ಸ್ವಾದ ಮಕ್ಕಳಿಗೆ ಇಷ್ಟವಾಗಲಿದೆ ಎಂದು ಕಂಪೆನಿ ವಿಶ್ವಾಸ ವ್ಯಕ್ತಪಡಿಸಿದೆ. www.mondelezindiafoods.com.




## ಇಂಟೆಕ್ಸ್‌ನಿಂದ ಹೊಸ ಟ್ಯಾಬ್ಲೆಟ್

ಮೊಬೈಲ್ ಮತ್ತು ಇನ್ನಿತರ ಎಲೆಕ್ಟ್ರಾನಿಕ್ ಉತ್ಪನ್ನಗಳಿಗೆ ಹೆಸರಾದ ಇಂಟೆಕ್ಸ್ ಕಂಪೆನಿ 'ಐ ಬಡ್ಡಿ ಇನ್7ಡಿಡಿ01' ಹೆಸರಿನ ಏಳು ಇಂಚಿನ ಟ್ಯಾಬ್ಲೆಟ್ ಅನ್ನು ಪರಿಚಯಿಸಿದೆ. ಇದು ಬಹುಪಯೋಗಿ ಸಾಧನವಾಗಿದ್ದು, ಬ್ಲೂಟೂಥ್, 3ಜಿ ಡ್ಯುಯಲ್ ಸಿಮ್ ಸೌಲಭ್ಯಗಳಿವೆ. 2800 ಮೆಗಾಹರ್ಟ್ಸ್‌ನ ಬ್ಯಾಟರಿ ಪ್ಯಾಕ್ ಇದ್ದು ಉತ್ತಮ ಅನುಭವ ನೀಡಲಿದೆ. ಬೆಲೆ 5499 ರೂಪಾಯಿ. ಮಾಹಿತಿಗೆ: 9811054648



## ಕಲರ್ ಪ್ಲಸ್ ಉಡುಪು



ಉಡುಪುಗಳ ಮಾರಾಟ ಕಂಪೆನಿ ಕಲರ್ ಪ್ಲಸ್ 'ಎಕ್ಸ್ ಕೂಲ್ ಫಿನಿಷ್' ಹೆಸರಿನ ಉಡುಪುಗಳನ್ನು ಬಿಡುಗಡೆ ಮಾಡಿದೆ. ಉಡುಪುಗಳ ತಯಾರಿಕೆಗೆ ಕೂಲಿಟ್ ತಂತ್ರಜ್ಞಾನ ಬಳಸಲಾಗಿದ್ದು, ಇವು ಬಟ್ಟೆಗಳು ತಂಪಾಗಿರಿಸುತ್ತವೆ ಎಂಬುದು ಕಂಪೆನಿ ವಿವರಣೆ. ಬೆಲೆ 1895 ರೂಪಾಯಿ. ಮಾಹಿತಿಗೆ: 8879644040

## ಹೊಸ ಸ್ಕೆಚರ್ಸ್ ಶೂ

ಕ್ರೀಡಾ ಉಡುಪುಗಳಿಗೆ ಹೆಸರಾದ ಸ್ಕೆಚರ್ಸ್ ಕಂಪೆನಿ ಕ್ರೀಡಾ ಬಟ್ಟೆಗಳು ಮತ್ತು ಶೂಗಳ ಹೊಸ ಸಂಗ್ರಹವನ್ನು ತಂದಿದೆ. ಇವುಗಳು ಉತ್ತಮ ರಿಯಾಯತಿ ದರದಲ್ಲಿ ಲಭ್ಯ. ಗುಣಮಟ್ಟ ಉತ್ತಮವಾಗಿದ್ದು, ದೀರ್ಘ ಬಾಳಿಕೆ ಬರುತ್ತದೆ ಎಂಬುದು ಕಂಪೆನಿ ಹೇಳಿಕೆ.



## ಲ್ಯಾಮಿ ಪೆನ್



ಆನ್‌ಲೈನ್ ಮಾರಾಟ ಕಂಪೆನಿ ವಿಲಿಯಂ ಪೆನ್ 'ಲ್ಯಾಮಿ ಸ್ಕ್ರೀನ್' ಹೆಸರಿನ ಲೇಖನಿಯನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ಈ ಪೆನ್ ಜರ್ಮನಿಯಲ್ಲಿ ವಿನ್ಯಾಸವಾಗಿದ್ದು, ಬರವಣಿಗೆಗೆ ಉತ್ತಮ ವೇಗ ಕೊಡುತ್ತದೆ ಎಂದು ಕಂಪೆನಿ ಹೇಳಿದೆ. ಬೆಲೆ 2150 ರೂಪಾಯಿ.